# ಸವೆದ ದಾರಿಯಲ್ಲಿ ನಿರಸ ನಡಿಗೆ

**ಸಂದೇಶವನ್ನು ಇಟ್ಟುಕೊಂಡು ಅದನ್ನು ಘೋಷಿಸಲು ಘಟನೆಗಳನ್ನು ಪೇರಿಸುತ್ತ ಹೋದರೆ ಅದು ಹೇಗೆ ನೀರಸಗೊಳ್ಳುತ್ತದೆ ಎಂಬುದಕ್ಕೆ ಈ ಕಿರುಚಿತ್ರ ಉದಾಹರಣೆ.**

**■ ಗೌರಿ**



‘ಕಷ್ಟದಲ್ಲಿರುವ ಜನರಿಗೆ ಸಹಾಯ ಮಾಡಿದರೆ ಒಳ್ಳೆಯದಾಗುತ್ತದೆ. ಬೇರೆಯವರಿಗೆ ಉಪಕಾರ ಮಾಡಿದರೆ ಅದು ಯಾವುದಾದರೊಂದು ರೂಪದಲ್ಲಿ ನಮಗೆ ಫಲಕೊಡುತ್ತದೆ’ ಎಂಬುದು ಬಹುಜನಪ್ರಿಯವಾದ ಮಾತು. ಜನರನ್ನು ಉಪಕಾರಕ್ಕೆ, ದಾನಕ್ಕೆ, ಸಮಾಜಸೇವೆಗೆ ಪ್ರೇರೇಪಿಸುವ ಇಂಥ ಹಲವು ಮಾತುಗಳನ್ನು ಕೇಳುತ್ತಲೇ ಇರುತ್ತೇವೆ. ಈ ಮಾತನ್ನೇ ಘೋಷವಾಕ್ಯದಂತೆ ಇಟ್ಟುಕೊಂಡಿರುವ ಕೃತಿಗಳೂ ಸಾಕಷ್ಟು ಬಂದಿವೆ. ‘ಜಸ್ಟ್ ಟೇಕ್ ಇಟ್ ಈಸಿ’ ಕಿರುಚಿತ್ರವೂ ಆ ಸಾಲಿಗೆ ಇನ್ನೊಂದು ಸೇರ್ಪಡೆ.

ಜನಪ್ರಿಯ ವ್ಯಾಖ್ಯೆಗಳು, ಸಂದೇಶಗಳು ಕೇಳಲೇನೋ ಆಕರ್ಷಕವೇ ಆಗಿರುತ್ತವೆ. ಆದರೆ ಅವುಗಳನ್ನೇ ಇಟ್ಟುಕೊಂಡು ಮಾಡಿರುವ ಕೃತಿಗಳು ಯಶಸ್ವಿಯಾಗುವುದು ಕಡಿಮೆ. ಯಾಕೆಂದರೆ ಯಾವುದೇ ಕೃತಿಯಲ್ಲಿ ಸಂದೇಶ ಎನ್ನುವುದು ನಾವು ಕಾಣಿಸುವ ಬದುಕಿನಲ್ಲಿಯೇ ಅಂತರ್ಗತ ಆಗಿರಬೇಕೇ ವಿನಾ ಸಂದೇಶಕ್ಕಾಗಿ ಕಥೆ ಕಟ್ಟಲು ಹೊರಟರೆ ಕೃತಿ ಯಶಸ್ವಿಯಾಗುವುದಿಲ್ಲ. ಕಿರುಚಿತ್ರದ ವೈಫಲ್ಯಕ್ಕೂ ಕಾರಣ ಅದೇ. ‘ಮನುಷ್ಯನ ಅಂತರಂಗದ ಸಂತೋಷ ಇರುವುದು ಎಲ್ಲಿ? ಅದನ್ನು ಪಡೆದುಕೊಳ್ಳುವುದು ಹೇಗೆ?’ ಎಂಬ ಪ್ರಶ್ನೆಗೆ ಮುಖಾಮುಖಿಯಾಗುವ ಪ್ರಯತ್ನವನ್ನು ಕಿರುಚಿತ್ರ ಮಾಡುತ್ತದೆ. ಮೊದಲೇ ಉತ್ತರ ಗೊತ್ತಿರುವ ಪ್ರಶ್ನೆಯನ್ನು, ಉತ್ತರ ಹೇಳಲಿಕ್ಕೋಸ್ಕರವೇ ಫ್ರೇಮ್ ಮಾಡಿದಾಗ ಅದು ಕೃತಕವಾಗಿ ಕಾಣಿಸುತ್ತದೆ.

ಹೆಸರು: ಜಸ್ಟ್ ಟೇಕ್ ಇಟ್ ಈಸಿ (ಹಿಂದಿ)
ನಿರ್ದೇಶನ: ಜ್ಯೋತಿ ಪ್ರಕಾಶ್
ನಿರ್ಮಾಣ: ಚಂದನ್ ಮೆಹ್ತಾ
ಛಾಯಾಗ್ರಹಣ: ಮನೋರಂಜನ್ ಜೆನಾ
ಸಂಕಲನ: ಸುಭಾಶ್ ಬನ್ವಾಲ
ಸಂಗೀತ: ಜೋಶ್ ಫ್ರಾಂಕ್ಲಿನ್
ತಾರಾಗಣ: ರಾಜ್ ಝುತ್ಸಿ, ಲವಕುಶ್, ಜಸ್‌ಪಾಲ್ ಕೌರ್, ಮಖೇಶ್ ಗಂಭೀರ್

ಆ ಕೃತಕತೆ ಈ ಇಡೀ ಕಿರುಚಿತ್ರದ ಉದ್ದಕ್ಕೂ ಕಾಣಿಸುತ್ತದೆ.

ಸಂಜಯ್ ದೊಡ್ಡ ಉದ್ಯಮಿ. ಆದರೆ ಆತ್ಮಸಂತೋಷ ಎನ್ನುವುದು ಅವನಿಗೆ ಇಲ್ಲ. ಯಾವಾಗಲೂ ವಿಚಿತ್ರ ಚಡಪಡಿಕೆಯಲ್ಲಿಯೇ ಇರುತ್ತಾನೆ. ಅದನ್ನು ಗಮನಿಸಿದ ಅವನ ತಂದೆ, ‘ಕಷ್ಟದಲ್ಲಿರುವವರಿಗೆ ಸಹಾಯ ಮಾಡು. ಆಗ ಖುಷಿ ಸಿಗುತ್ತದೆ. ಹಾಗೆ ಮಾಡಿದ ಸಹಾಯದ ಫಲ ಹೇಗಾದರೂ ನಿನಗೆ ಸಿಕ್ಕೇ ಸಿಗುತ್ತದೆ’ ಎಂದು ಹೇಳುತ್ತಾನೆ. ಆ ಮಾತನ್ನು ಕಾರ್ಯಗತಗೊಳಿಸಲಿಕ್ಕೇ ನಿರ್ದೇಶಕರು ಮುಂದಿನ ಘಟನೆಗಳನ್ನು ಜೋಡಿಸುತ್ತ ಹೋಗಿದ್ದಾರೆ. ಹೀಗೆ ಬಲವಂತವಾಗಿ ಕೂಡಿಸಿರುವುದರಿಂದ ಆ ಘಟನೆಗಳಲ್ಲಾಗಲಿ, ಒಟ್ಟಾರೆ ಕಥೆಯ ಪರಿಣಾಮದಲ್ಲಾಗಲಿ ತೀವ್ರತೆ ಇಲ್ಲ. ಮತ್ತದು ಕಥನದ ಚೌಕಟ್ಟಿನೊಳಗೂ ನಿಜ ಅನಿಸುವುದಿಲ್ಲ. ಸಂಜಯನ ಮಗಳಿಗೆ ಅಪಘಾತವಾದಾಗ ದೂರದಲ್ಲೆಲ್ಲೋ ಬೂಟ್ ಪಾಲಿಶ್ ಮಾಡುತ್ತಿರುವ ಚರಣ್‌ದಾಸ್‌ನಿಗೆ ಆ ಸುದ್ದಿ ಹೇಗೆ ತಿಳಿಯಿತು? ಮಗನ ವಿದ್ಯಾಭ್ಯಾಸಕ್ಕೆ ಬಳಸು ಎಂದು ತನ್ನ ಡ್ರೈವರನಿಗೆ ಹಣ ಕೊಡುವ ಸಂಜಯ ಮತ್ತೆ ‘ಯಾವುದಾದರೂ ಒಳ್ಳೆಯ ಕೆಲಸಕ್ಕೆ ಬಳಸು’ ಎಂದು ಹೇಳುವುದು ಯಾಕೆ? ಯಾಕೆ ಎಲ್ಲರಿಗೂ ಒಂದು ಮಾತು ಕೇಳುತ್ತಿದ್ದ ಹಾಗೆಯೇ ಜ್ಞಾನೋದಯವಾಗಿಬಿಡುತ್ತದೆ? ಹೀಗೆ ಹತ್ತು ಹಲವು ತಾರ್ಕಿಕ ಪ್ರಶ್ನೆಗಳು ಚಿತ್ರದುದ್ದಕ್ಕೂ ಏಳುತ್ತವೆ. ಆ ಇಡೀ ಘಟನಾವಳಿಗಳ ಸರಣಿ ಸಹಜವಾಗಿ ಬೆಳೆಯದಿರುವುದೇ ಇದಕ್ಕೆ ಕಾರಣ.

ಕಿರುಚಿತ್ರ ಮಾಧ್ಯಮಕ್ಕೆ ತುಸು ದೀರ್ಘ ಅನಿಸಬಹುದಾದಷ್ಟು (27 ನಿಮಿಷಗಳು) ಅವಧಿಯನ್ನು ಈ ಚಿತ್ರ ಹೊಂದಿದೆ. ಕಂಟೆಂಟ್ ಗಟ್ಟಿಯಾಗಿದ್ದರೆ ಆ ಅವಧಿ ದೀರ್ಘವೇನೂ ಅನಿಸುವುದಿಲ್ಲ. ಆದರೆ ಈ ಕಿರುಚಿತ್ರದಲ್ಲಿ ಈ ಎರಡು ಸಾಲಿನ ಸಂದೇಶವನ್ನು ಹೇಳಲು ಇಷ್ಟೊಂದು ತಿಣುಕಾಡಬೇಕಿತ್ತೆ ಎಂದು ಅನಿಸದೇ ಇರದು. ಐದೇ ನಿಮಿಷದಲ್ಲಿ ಪರಿಣಾಮಕಾರಿಯಾಗಿ ಹೇಳಬಹುದಾಗಿದ್ದನ್ನು ಅರ್ಧಗಂಟೆ ಎಳೆದಿದ್ದಾರೆ. ತಾಂತ್ರಿಕವಾಗಿಯೂ ಚಿತ್ರ ಗಟ್ಟಿಯಾಗಿಲ್ಲದಿರುವುದು ಇನ್ನೊಂದು ಕೊರತೆ.

ಕಿರುಚಿತ್ರ ವೀಕ್ಷಣೆಗೆ https://bit.ly/3j0rAvV ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.